**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 02.06.2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎನ್.ಟಿ.ಆರ್.ವಕೀಲರಿಂದ.**

ನಾನು ಈ ದಾವೆಯಲ್ಲಿ ವಾದಿ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು, ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

ಮುಂದುವರೆದ ಮುಖ್ಯ ವಿಚಾರಣೆಗೆ ವಾದಿಪರ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

Sd/-

(ಸಚಿನ್ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ .ಎಂ.ಎಫ್.ಸಿ., ತಿ.ನರಸೀಪುರ.**